**ಚಾವಿಸನಿನಿಯಲ್ಲಿ ಕಿರಿಯ ಪವರ್‌ಮ್ಯಾನ್ ಹುದ್ದೆಯ ಸ್ಥಳ ನಿಯುಕ್ತಿಗಾಗಿ ಪಾಲಿಸಬೇಕಾದ ಮಾರ್ಗಸೂಚನೆಗಳು**

1. ಅಭ್ಯರ್ಥಿಗಳು ತಮ್ಮ ಮೂಲ ಗುರುತಿನ ಚೀಟಿ(ಆಧಾರ ಕಾರ್ಡ್/ವೋಟರ್ ಕಾರ್ಡ್/ಚಾಲನಾ ಪರವಾನಗಿ/ಪಾಸ್‌ಪೋರ್ಟ್/ಪಾನ್ ಕಾರ್ಡ್) ಹಾಗೂ ಗುರುತಿನ ಚೀಟಿಯ ಸ್ವ-ದೃಢೀಕೃತ ಪ್ರತಿಯೊಂದಿಗೆ ಹಾಜರಾಗುವುದು.
2. ಈಗಾಗಲೇ ಈ ಕಛೇರಿಯಿಂದ ಎಲ್ಲಾ ಅಭ್ಯರ್ಥಿಗಳಿಗೆ ಕರೆಪತ್ರಗಳನ್ನು ರವಾನಿಸಿದ್ದು, ಸದರಿ ಕರೆಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.
3. ಅಭ್ಯರ್ಥಿಗಳು ನಿಗದಿತ ಸಮಯ 9 ಗಂಟೆಯೊಳಗೆ ನೇಮಕಾತಿಗೆ ಸಂಬಂಧಿಸಿದ ಪೂರಕ ದಾಖಲಾತಿಗಳೊಂದಿಗೆ ಹಾಜರಾಗುವುದು. (ಯಾವುದೇ ಕಾಲ ವಿಳಂಬಕ್ಕೆ ಅವಕಾಶವಿರುವುದಿಲ್ಲ)ಒಂದು ವೇಳೆ ಅಭ್ಯರ್ಥಿಯು ನಿಗದಿತ ಸಮಯಕ್ಕೆ ಬಾರದಿದ್ದರೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.
4. ಚಾವಿಸನಿನಿ ಜಾಲತಾಣದಲ್ಲಿ ಈಗಾಗಲೇ ಖಾಲಿಯಿರುವ ಕಿರಿಯ ಪವರ್‌ಮ್ಯಾನ್ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. **ಸದರಿ ಪಟ್ಟಿಯನ್ನು ಡೌನ್ ಲೋಡ್ ಮಾಡಿಕೊಂಡು, ಸ್ಥಳದ ಆಯ್ಕೆಯನ್ನು ಆದ್ಯತೆ ಮೇರೆಗೆ ಮುಂಚಿತವಾಗಿಯೇ ನಿರ್ಣಯಿಸಿಕೊಂಡಿರುವುದು.**
5. ಕೌನ್ಸಿಲಿಂಗ್‌ಗಾಗಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಮೆರಿಟ್ ಅನುಸಾರ ಕೌನ್ಸಿಲಿಂಗ್ ನಿಗದಿಪಡಿಸಲಾಗಿದ್ದು, ಅದರಂತೆ ಮೆರಿಟ್ ಅನುಸಾರ ನಮೂದಿಸಿರುವ ಕ್ರಮ ಸಂಖ್ಯೆವಾರು ನಿಗಧಿತ ಸ್ಥಳದಲ್ಲಿ ಆಸೀನರಾಗುವುದು.
6. ಒಮ್ಮೆಗೆ ಪ್ರತಿ 08 ಅಭ್ಯರ್ಥಿಗಳಂತೆ ಕೌನ್ಸಿಲಿಂಗ್ ಸಭೆ ನಡೆಸಲಾಗುವುದು.
7. ಮೆರಿಟ್ ಅನುಸಾರ ಅಭ್ಯರ್ಥಿಗಳು ಆಯ್ಕೆ ಮಾಡಿದ ಸ್ಥಳಗಳನ್ನು ಹೊರತುಪಡಿಸಿ ಉಳಿದ ಸ್ಥಳಗಳಲ್ಲಿ **ನಂತರದ ಅಭ್ಯರ್ಥಿಯು ಆದ್ಯತೆ ಮೇರೆಗೆ ಮೊದಲ ಆಯ್ಕೆಯ ಸ್ಥಳವನ್ನು ನಿರ್ಣಯಿಸಿಕೊಂಡಿರುವುದು.** (ಯಾವುದೇ ಕಾಲ ವಿಳಂಬಕ್ಕೆ ಅವಕಾಶವಿರುವುದಿಲ್ಲ)
8. ಸ್ಥಳ ನಿಯುಕ್ತಿಗೊಳಿಸಿದ ಅಭ್ಯರ್ಥಿಗಳಿಗೆ ಸ್ವ-ದೃಢೀಕರಣ ಪತ್ರವನ್ನು ಪಡೆದು, ಸ್ಥಳ ನಿಯುಕ್ತಿಗೊಳಿಸಿರುವ ಕುರಿತು ಹಿಂಬರಹ ನೀಡಲಾಗುವುದು.
9. ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ದಾಖಲಾತಿಗಳು ನೈಜತೆ ಹೊಂದಿಲ್ಲದಿರುವುದು ಕಂಡುಬಂದಲ್ಲಿ ಅಥವಾ ಪೊಲೀಸ್ ಪೂರ್ವ ಚರಿತ್ರೆ ವರದಿಯು ವ್ಯತಿರಿಕ್ತವಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಜಾರಿ ಮಾಡಲಾಗುವುದಿಲ್ಲ.
10. ಆಯ್ಕೆಗೊಂಡ ಅಭ್ಯರ್ಥಿಗಳ **ಎಲ್ಲಾ ಮೂಲ ದಾಖಲಾತಿಗಳು ಸಕ್ಷಮ ಪ್ರಾಧಿಕಾರದಿಂದ ಅಧಿಕೃತವಾಗಿ ನೈಜತೆ ದೃಢೀಕರಣ ಸ್ವೀಕರಿಸಿದ ನಂತರ ನೇಮಕಾತಿ ಆದೇಶ ನೀಡಲಾಗುವುದು.** ನೇಮಕಾತಿ ಆದೇಶ ನೀಡುವ ಕುರಿತು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ದಿನಾಂಕ: 08.05.2022 ಭಾನುವಾರದಂದು ನಿಗಮ ಕಛೇರಿಯಲ್ಲಿ ಜರುಗಲಿರುವ ಕೌನ್ಸಿಲಿಂಗ್ ಸಭೆಗೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಜರಾಗದಿದ್ದಲ್ಲಿ, ಕೌನ್ಸಿಲಿಂಗ್ ನಂತರ ಖಾಲಿ ಉಳಿಯುವ ಚಾವಿಸನಿನಿ ವ್ಯಾಪ್ತಿಯ ಯಾವುದಾದರೂ ಕಚೇರಿಗಳಿಗೆ ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು.

ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ)
ಚಾವಿಸನಿನಿ., ಮೈಸೂರು